# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1211 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಣ್ಣು ಮತ್ತು ಕಲ್ಲು ಗಣಿಗಾರಿಕೆಗೆ ಪೂರ್ವದಲ್ಲಿ ಕಂದಾಯ, ಅರಣ್ಯ ಇಲಾಖೆ ಗಳಿಂದ ಪಡೆದ ತಾಂತ್ರಿಕ ವರದಿಗಳು ಮತ್ತು ಮುರಂ ಉಪ ಖನಿಜ ತೆಗೆಯಲು ಕೃಷಿ ಅಧಿಕಾರಿಗಳಿಂದ ಪಡೆದ ದೃಢೀಕರಣಗಳು ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)</td><td>
• ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಯಲ್ಲಿ ಮಣ್ಣು ಮತ್ತು ಕಲ್ಲು ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ಪೂರ್ವದಲ್ಲಿ ಪಡೆದ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಸಲ್ಲಿಕೆಯಾದ ನಿರಾಕ್ಷೇಪಣೆಗಳ ವರ್ಷವಾರು ಮಾಹಿತಿ ಕೆಳಕಂಡಂತಿದೆ:
<table>
<tr><th>ವರ್ಷ</th><th>ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣೆಗಳ ಸಂಖ್ಯೆ</th></tr>
<tr><td>2021-22</td><td>8</td></tr>
<tr><td>2022-23</td><td>21</td></tr>
<tr><td>2023-24</td><td>17</td></tr>
<tr><td>ಒಟ್ಟು</td><td>46</td></tr>
</table>
• ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿ ಯಲ್ಲಿ ಮುರಂ ತೆಗೆಯಲು ಕಾರ್ಯಾನುಮತಿ ನೀಡುವ ಪೂರ್ವದಲ್ಲಿ ಕೃಷಿ ಇಲಾಖೆಯಿಂದ ಪಡೆದ ದೃಢೀಕರಣಗಳ ವರ್ಷವಾರು ವಿವರ ಕೆಳಕಂಡಂತಿದೆ:
<table>
<tr><th>ವರ್ಷ</th><th>ಕಂದಾಯ/ ಅರಣ್ಯ ಇಲಾಖೆ (ಲ್ಯಾಟರೈಟ್ ಉಪಖನಿಜಕ್ಕೆ)</th></tr>
<tr><td>2021-22</td><td>0</td></tr>
<tr><td>2022-23</td><td>1</td></tr>
<tr><td>2023-24</td><td>2</td></tr>
<tr><td>ಒಟ್ಟು</td><td>3</td></tr>
</table>
</td></tr>
<tr><td>ಆ)</td><td>ಆಯಾಯ ಗ್ರಾಮ ಪಂಚಾಯಿತಿಗಳ ಪ್ರದೇಶ ಗಳಲ್ಲಿ ಪ್ರತಿ ವರ್ಷ ಗಣಿಗಾರಿಕೆಯಿಂದ ಸಂಗ್ರಹ ವಾಗುವ ರಾಜಧನದ ವಿವರ ವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ನೀಡಲು ನಿಯಮಗಳಲ್ಲಿ -</td><td>
• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36 ರಂತೆ ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆ ಯಿಂದ ಸಂಗ್ರಹವಾದ ರಾಜಧನ ಮೊತ್ತವನ್ನು ರಾಜ್ಯ ಸಂಚಿತ ನಿಧಿಗೆ ಜಮೆ ಮಾಡಲಾಗುವುದು.<br>
• ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ರಾಜಧನ ಸಂಗ್ರಹ ವಿವರಗಳ ಮಾಹಿತಿಯನ್ನು ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br>
• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 31-R(13) ಹಾಗೂ ನಿಯಮ 31-ZA(3) ರಂತೆ IV,
</td></tr>
</table>

. . . 2

| | | |
|---|---|---|
| | -ಅವಕಾಶಗಳಿಲ್ಲದಿದ್ದಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ರಾಜಧನದ ಪಾಲನ್ನು ನಿಗದಿಪಡಿಸುವುದು ಹೇಗೆ; | -V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರದ ಮರಳು ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನದ ಮೊತ್ತದಲ್ಲಿ ಶೇಕಡ 25 ರಷ್ಟು ಮೊತ್ತವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಹಾಗೂ ಶೇಕಡ 25 ರಷ್ಟು ಮೊತ್ತವನ್ನು ಆಯಾ ತಾಲ್ಲೂಕಿನ ಉಳಿದ ಗ್ರಾಮ ಪಂಚಾಯಿತಿಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಅದರಂತೆ, ಪ್ರತಿ ವರ್ಷ ಸದರಿ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ಬಿಡುಗಡೆ ಗೊಳಿಸಲಾಗುತ್ತಿದೆ. |
| ಇ) | ಸ್ಥಳೀಯ ಸಂಸ್ಥೆಗಳಿಗೆ ಈ ಮೊದಲು ನೀಡುತ್ತಿದ್ದ ರಾಜಧನದ ಪಾಲನ್ನು ಪ್ರಸ್ತುತ ನೀಡಲಾಗುವುದಿಲ್ಲವೇ? ಹಾಗಿದ್ದರೆ, ಅದಕ್ಕೆ ಕಾರಣಗಳೇನು; ಈ ಕುರಿತು ನಿಯಮಗಳಿಗೆ ತಿದ್ದುಪಡಿ ಯಾವಾಗ ಮಾಡಲಾಗಿದೆ; | • ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ಸ್ವೀಕೃತವಾದ ಮತ್ತು ಸಂಗ್ರಹವಾದ ರಾಜಧನ ಮೊತ್ತವನ್ನು ರಾಜ್ಯ ಸಂಚಿತ ನಿಧಿ (State Consolidated Fund) ಗೆ ಜಮೆ ಮಾಡಲಾಗುತ್ತದೆ.<br>• ರಾಜ್ಯ ಸಂಚಿತ ನಿಧಿಯಿಂದ ಆಯ-ವ್ಯಯದ ಮೂಲಕ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಹಣವನ್ನು ಬಿಡುಗಡೆಗೊಳಿಸಲಾಗುತ್ತದೆ.<br>• ಮರಳು ಗಣಿಗಾರಿಕೆಗೆ ಸಂಬಂಧಿಸಿದಂತೆ ರಾಜಧನದ ಶೇಕಡ 25 ರಷ್ಟು ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಮತ್ತು ಶೇಕಡ 25ರಷ್ಟು ಮೊತ್ತವನ್ನು ಆಯಾ ತಾಲ್ಲೂಕಿನ ಉಳಿದ ಗ್ರಾಮ ಪಂಚಾಯಿತಿಗಳಿಗೆ ನಿಯಮಾನುಸಾರ ಬಿಡುಗಡೆಗೊಳಿಸಲಾಗುತ್ತಿದೆ. |
| ಈ | ಒಂದು ಗ್ರಾಮ ಪಂಚಾಯಿತಿ ಯಲ್ಲಿ ಅಥವಾ ಪಕ್ಕದ ರಾಜ್ಯ ದಲ್ಲಿ ಗಣಿಗಾರಿಕೆ ಮಾಡಿ ಅದನ್ನು ಇತರ ಭಾಗದ ರಸ್ತೆಗಳಲ್ಲಿ ಸಾಗಿಸುವಾಗ ಹಾನಿಗೊಳಗಾದ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆ ಮಾಡಲಾಗುವುದೇ: ದಕ್ಷಿಣ ಕನ್ನಡ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಲ್ಲಿ ಮೀಸಲಿಟ್ಟ ಅನುದಾನ ಎಷ್ಟು; ಅದನ್ನು ಗಣಿಬಾಧಿತ ರಸ್ತೆಗಳ ದುರಸ್ತಿಗೆ ಮೀಸಲಿಡುವ ಮಾನದಂಡಗಳೇನು; (ವಿವರ ನೀಡುವುದು) | • ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ರ ನಿಯಮ 18 ರಂತೆ, ಡಿ.ಎಂ.ಎಫ್ ರಡಿ ಸಂಗ್ರಹವಾದ ಒಟ್ಟು ನಿಧಿಯಲ್ಲಿ ಶೇಕಡ 10 ರಷ್ಟು ಮೊತ್ತವನ್ನು ದತ್ತಿನಿಧಿಗೆ (ಎಂಡೋಮೆಂಟ್ ಉದ್ದೇಶಗಳಿಗಾಗಿ) ಶೇಕಡ 05 ರಷ್ಟು ಮೊತ್ತವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿರಿಸಿದ ನಂತರ ಉಳಿದ ಶೇಕಡ 85ರಷ್ಟು ಮೊತ್ತವನ್ನು ಗಣಿಬಾಧಿತ ಪ್ರದೇಶ ಗಳ ಅಭಿವೃದ್ಧಿಗಾಗಿ ವಿನಿಯೋಗಿಸಬೇಕಾಗಿರುತ್ತದೆ.<br>• ಮೇಲ್ಕಂಡಂತೆ ಹಂಚಿಕೆಯಾದ ಮೊತ್ತದಲ್ಲಿ ಗಣಿ ಬಾಧಿತ ಪ್ರದೇಶದಲ್ಲಿನ ಹೆಚ್ಚಿನ ಅದ್ಯತಾ ವಲಯ ಗಳಿಗೆ ಕನಿಷ್ಠ 60% ಮತ್ತು ಇತರೆ ಆದ್ಯತೆಯ ವಲಯ ಗಳಿಗೆ ಗರಿಷ್ಠ 40% ಮೀರದಂತೆ ನಿಧಿಯನ್ನು ವಿನಿಯೋಗಿಸಬೇಕಿರುತ್ತದೆ.<br>• ಇತರೆ ಆದ್ಯತೆಯ ವಲಯಗಳಿಗೆ ಮೀಸಲಿರಿಸಿದ 40% ಅನುದಾನದಲ್ಲಿ ಭೌತಿಕ ಮೂಲಸೌಕರ್ಯ ವಲಯದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿದೆ.<br>• ಅದರಂತೆ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಗಣಿಗಾರಿಕೆಯಿಂದ ಸಂಗ್ರಹವಾಗುವ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಿಂದ ಅನುದಾನವನ್ನು ಮೀಸಲಿಟ್ಟು, ಗಣಿ ಬಾಧಿತ ಪ್ರದೇಶಗಳ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br>• ಇಲ್ಲಿಯವರೆಗೆ ₹118.50 ಲಕ್ಷಗಳ ವೆಚ್ಚದಲ್ಲಿ 29 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. |

. . . 3

| | | |
|---|---|---|
| ಉ) | ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ಕಲ್ಲುಗಣಿ ಗುತ್ತಿಗೆ ಕರಾರು (ನಮೂನೆ-ಇ)ರ ಭಾಗ-7ರ ಷರತ್ತು ನಿಬಂಧನೆಗಳಂತೆ ಕಲ್ಲು ಗಣಿ ಗುತ್ತಿಗೆದಾರರು ಸುರಕ್ಷತೆಗಾಗಿ ತಂತಿಬೇಲಿ ಅಳವಡಿಸಿದ ಹಾಗೂ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು; | • ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ 141 ಗುತ್ತಿಗೆಗಳು ಚಾಲ್ತಿಯಲ್ಲಿದ್ದು, ಈ ಪೈಕಿ 61 ಕಲ್ಲು ಗಣಿ ಗುತ್ತಿಗೆಳಿಗೆ ತಂತಿಬೇಲಿ ಅಳವಡಿಸಲಾಗಿದ್ದು, 80 ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಸುತ್ತಲೂ ತಂತಿಬೇಲಿ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಊ) | ಮೈನ್ ಕ್ಲೋಷರ್ ಪ್ಲಾನ್ ನಂತೆ ಗಣಿ ಗುತ್ತಿಗೆದಾರರು ಗುಂಡಿಗಳನ್ನು ಪುನಶ್ಚೇತನ ಗೊಳಿಸಿದ ಮತ್ತು ತಡೆಗೋಡೆ ನಿರ್ಮಿಸಿದ ಪ್ರಕರಣಗಳೆಷ್ಟು; ಇನ್ನು ಸುರಕ್ಷತಾ ಕ್ರಮ ವಹಿಸ ಬೇಕಾದ ಪ್ರಕರಣಗಳೆಷ್ಟು? | ➢ ಪ್ರಸ್ತುತ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗಣಿಗಾರಿಕೆ ನಿರ್ವಹಿಸಲು ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಕಡ್ಡಾಯಗೊಳಿಸಲಾಗಿರುತ್ತದೆ. ಮೈನ್ ಕ್ಲೋಸರ್ ಪ್ಲಾನನ್ನು ಗುತ್ತಿಗೆ ಅವಧಿ ಮುಕ್ತಾಯವಾದ ನಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36(5) ರಂತೆ, ಕಲ್ಲುಗಣಿ ಗುತ್ತಿಗೆ ಪ್ರದೇಶದ ಪರಿಸರ ಅನುಮತಿ ಪತ್ರದನುಸಾರ ನಿಗದಿಪಡಿಸಿರುವ ವಾರ್ಷಿಕ ಉಪಖನಿಜ ಉತ್ಪಾದನೆ ಪ್ರಮಾಣಕ್ಕೆ ತಗಲುವ ರಾಜಧನದ ಶೇಕಡ 10 ರಷ್ಟು Upfront Payment ಮೊತ್ತದ ಬ್ಯಾಂಕ್ ಗ್ಯಾರಂಟಿ ಯನ್ನು ಪಡೆಯಲಾಗುತ್ತದೆ.<br>➢ ಗುತ್ತಿಗೆದಾರರನು ಗುತ್ತಿಗೆ ಅವಧಿ ಮುಕ್ತಾಯವಾದ ನಂತರ ಮೈನ್ ಕ್ಲೋಸರ್ ಪ್ಲಾನ್ ನಂತೆ ಕ್ವಾರಿ ಗುಂಡಿ ಗಳನ್ನು ಪುನಶ್ಚೇತನಗೊಳಿಸಲು ವಿಫಲನಾದಲ್ಲಿ, ಸದರಿ ಬ್ಯಾಂಕ್ ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಂಡು ಕ್ವಾರಿ ಗುಂಡಿಯ ಸುತ್ತಲೂ ಸುರಕ್ಷತೆ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.<br>➢ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಗಣಿಗಾರಿಕೆ ನಡೆದು ಅಪಾಯಕಾರಿಯಾಗಿರುವ ಪರಿತ್ಯಕ್ತ ಕ್ವಾರಿ ಗುಂಡಿಗಳ ಸುತ್ತಲೂ ಸುರಕ್ಷತೆಗಾಗಿ ತಡೆಗೋಡೆ ನಿರ್ಮಿಸಲು ಆಯ-ವ್ಯಯದಲ್ಲಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದ್ದು, ಸದರಿ ಮೊತ್ತವನ್ನು ಬಳಸಿಕೊಂಡು ಇಲಾಖೆಯಿಂದ ಪರಿತ್ಯಕ್ತ ಕ್ವಾರಿ ಗುಂಡಿಗಳ ಸುತ್ತಲೂ ತಡೆಗೋಡೆ ನಿರ್ಮಿಸಲಾಗುತ್ತಿದೆ.<br>➢ ಸದರಿ ಅನುದಾನವನ್ನು ಬಳಸಿಕೊಂಡು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಪರಿತ್ಯಕ್ತ ಕ್ವಾರಿ ಗುಂಡಿಗಳ ಸುತ್ತಲೂ ತಡೆಗೋಡೆ ನಿರ್ಮಿಸಿರುವ ಪ್ರಕರಣಗಳು ಇರುವುದಿಲ್ಲ. |

ಸಂಖ್ಯೆ ಸಿಐ-ಎಂಎಂಎನ್/93/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.